ಬಲು ಮೋಜು. ಅಳಿಲು, ಮೈನಾ ಹಕ್ಕಿ, ಚುಕ್ಕೆ ಹಕ್ಕಿಗಳಿಗೆ ಒಳ್ಳೆಯ ಆವಾಸ ಸ್ಥಾನ. ಮಳೆಗಾಲದಲ್ಲಿ ಕೋಗಿಲೆಗಳಿಗೆ ಇದರ ಮೇಲೆ ಕುಳಿತು ಸಂಗಾತಿಯನ್ನು ಕರೆಯಲು 'ಕುಹೂ'ಗೊಡಲು ಇದು ಆಶ್ರಯ ನೀಡುತ್ತದೆ. ಬೇಸಿಗೆಯಲ್ಲಿ ಇದರ ಕಾಯಿಗಳ ತಿರುಳನ್ನು ತಿನ್ನಲು ಗಿಳಿಗಳ ಹಿಂಡೇ ಎಲ್ಲೆಲ್ಲಿಂದಲೋ ಬರುತ್ತದೆ. ಆಗ 'ನಿನ್ನೊಳು ನಾನೋ, ನನ್ನೊಳು ನೀನೋ' ಎನ್ನುವಂತೆ ಮರದ ಎಲೆ ಯಾವುದು, ಗಿಳಿ ಯಾವುದು ಎಂದೇ ತಿಳಿಯುವುದಿಲ್ಲ.

ಆ ಮರವನ್ನು ನೋಡಿದಾಗಲೆಲ್ಲಾ ನನಗೆ ಜೋಕ್ ಒಂದು ಜ್ಞಾಪಕಕ್ಕೆ ಬರುತ್ತದೆ: ಒಬ್ಬ ವ್ಯಕ್ತಿ ದೇವರ ಹತ್ತಿರ ವರ ಕೇಳಿದನಂತೆ – 'ದೇವಾ, ಈ ಬೇಸಿಗೆಯ ಬಿಸಿಲು ತಾಳಲಾರೆ. ನನಗೆ ಧಾರಾಳವಾಗಿ ನೆರಳು ನೀಡುವ, ಮಳೆಯಿಂದ ರಕ್ಷಣೆ ನೀಡುವ, ಯಥೇಚ್ಛ ಹೂ ಬಿಡುವ, ಮರವೊಂದನ್ನು ಕರುಣಿಸು. ಆದರೆ, ಅದರಿಂದ ಕಸ ಮಾತ್ರ ಬೀಳಬಾರದು'. ದೇವರು 'ತಥಾಸ್ತು' ಎಂದು ಅದೃಶ್ಯನಾದ. ಮರುಕ್ಷಣದಲ್ಲೇ ಆ ವ್ಯಕ್ತಿಯ ಕೈಯಲ್ಲಿ ಚೆಂದದ, ಹೂಗಳ ಚಿತ್ರವಿರುವ ಛತ್ರಿಯೊಂದಿತ್ತು! ಆತ ಕೇಳಿದ ಹಾಗೆ ನೆರಳು ನೀಡುವ, ಹೂಗಳಿರುವ, ಕಸ ಬೀಳದ ವಸ್ತು ಅದೇ ತಾನೇ?!



ಮರ ಎಂದ ಮೇಲೆ ಕಸ ಬೀಳದೆ ಇರುತ್ತದೆಯೇ? ತಿಳಿವಳಿಕೆ ಇರುವ ಮನುಷ್ಯನೇ ಭೂಮಿಯ ಮೇಲೆ ಯಾವ್ಯಾವುದೋ ಕಸದ ರಾಶಿ ಒಟ್ಟುತ್ತಿರುವಾಗ, ಇನ್ನು ಪಾ...ಪದ ಮರ! ತಾನೇ ಉತ್ಪಾದಿಸಿದ ಹೂವು, ಎಲೆ, ಬೀಜ ಎಲ್ಲವನ್ನೂ ಬೀಳಿಸುತ್ತಿರುತ್ತದೆ. ಹೊಗೆ, ದೂಳು, ಕಿಡಿಗೇಡಿಗಳ ಪ್ರಹಾರ ಇವೆಲ್ಲವನ್ನು ಜಿತೇಂದ್ರಿಯನಂತೆ ತಾಳ್ಮೆಯಿಂದ ತಡೆದುಕೊಂಡು ನಿಂತಿರುತ್ತದಲ್ಲಾ? ಬಾಯಾರಿದರೆ ಯಾರಲ್ಲೂ ನೀರು ಕೇಳದು, ತಾನೇ ನೀರಿನ ಸೆಲೆ ಕಂಡುಕೊಳ್ಳುತ್ತದೆ. ಆಹಾರ ಬೇಕೆಂದು ಕೂಡ ಕೇಳುವುದಿಲ್ಲ, ತಾನೇ ತನ್ನ ಬುಡದಲ್ಲಿ ಬಿದ್ದ ಕಸ ಕೊಳೆತು ಗೊಬ್ಬರವಾದಾಗ ಅದನ್ನೇ ಸ್ವೀಕರಿಸುತ್ತದೆ. ಯಾರ ಉಪಚಾರವೂ ಅದಕ್ಕೆ ಬೇಡ. ಆ ಮರವನ್ನು ನೋಡಿದರೆ ಅದೊಂದು 'ಮೌನ ಯೋಗಿ' ಎಂದೇ ನನಗನಿಸುತ್ತದೆ. ವಾಮನ ತ್ರಿವಿಕ್ರಮನಾಗಿ ತನ್ನ ಪಾದಗಳನ್ನು ಮೂಲೋರ್ಕಗಳಿಗೂ ವಿಸ್ತರಿಸಿದರೆ, ಈ ಮರವು ಎತ್ತರೆತ್ತರಕ್ಕೆ ಬೆಳೆಯುತ್ತಾ ಚಾಚಿದ ಕೈಗಳಂತೆ ತನ್ನ ಕೊಂಬೆಗಳನ್ನು ಅಗಲವಾಗಿ ಹರಡುತ್ತಾ ನನ್ನ ಸಮಾನರ್ಯ್ಯಾರು ಎಂಬಂತಿದೆ!

ಅದರ ಕೊಂಬೆಗಳು ಎಷ್ಟುದ್ದ ಬೆಳೆಯಿತೆಂದರೆ ನಮ್ಮ ಮನೆಯ ಮೊದಲನೇ ಮಹಡಿಯಲ್ಲಿರುವ ಮಕ್ಕಳ ಕೋಣೆಯ ಕಿಟಕಿಯವರೆಗೂ ಬೆಳೆದುಬಂದವು! ಆಗ ಇನ್ನೊಂದು ಸಮಸ್ಯೆ ಎದುರಾಯಿತು. ಅದರ ಹೂವಿನ ಕಟುವಾಸನೆಯಿಂದ ನಮ್ಮ ಮಗನಿಗೆ ಅಲರ್ಜಿಯಾಗತೊಡಗಿ ಒಂದೇ ಸಮನೆ ಸೀನಲಾರಂಭಿಸಿದ. ಮಳೆಗಾಲ ಬಂದೊಡನೆ ಮರದಿಂದ ಕಂಬಳಿ ಹುಳುಗಳು ಬರಲಾರಂಭಿಸಿದವು. ಎಲ್ಲಿ ಗೋಡೆಯನ್ನು ತಾಕಿ ನಿಂತರೂ ಮೈಗೆ ಅಂಟಿಕೊಳ್ಳಲಾರಂಭಿಸಿದವು. ಗಾತ್ರದಲ್ಲಿ ಪುಟ್ಟದಾದರೂ, ಅದು ಮೈಗೆ ಸೋಕಿದೊಡನೆ ಆಗುತ್ತಿದ್ದ ತುರಿಕೆ ವಿಪರೀತವಾಗಿತ್ತು. 'ಇಂದಿನ ಮಕ್ಕಳೇ ಮುಂದಿನ